# ಪೃಥ್ವಿಯ ಅಂಬರದ ಕನಸು



ದಾವಣಗೆರೆಯ ಶಾಮನೂರಿನ ಹುಡುಗ ಪೃಥ್ವಿ 'ಪದವಿ ಪೂರ್ವ' ಸಿನಿಮಾದ ಹೀರೊ. ತಮ್ಮ ವಯಸ್ಸಿಗೆ ಮತ್ತು ಮನಸ್ಸಿಗೆ ಹತ್ತಿರವಿರುವ ಸಿನಿಮಾದಲ್ಲಿ ನಟಿಸುತ್ತಿರುವ ಖುಷಿ ಅವರದು.

■ ಪದ್ಮನಾಭ ಭಟ್

ದಾವಣಗೆರೆಯಲ್ಲಿ ಪಿಯುಸಿ ಮೊದಲ ವರ್ಷದಲ್ಲಿ ಓದುತ್ತಿದ್ದ ಆ ಹುಡುಗನಿಗೆ ಸಿನಿಮಾ ಹುಚ್ಚು. ನೋಡುವ ಹುಚ್ಚಷ್ಟೇ ಅಲ್ಲ, ಸಿನಿಮಾದಲ್ಲಿ ನಟಿಸುವ ಹುಚ್ಚು. ಪಿಯುಸಿ ಓದುತ್ತಿರುವ ಹುಡುಗನೇನು ಸಿನಿಮಾ ಮಾಡ್ತಾನೆ ಬಿಡಿ ಅನ್ನಬೇಡಿ, ಆರನೇ ತರಗತಿಯಲ್ಲಿ ಇರುವಾಗಲೇ ಆ ಹುಡುಗ, ನಾನು ಸಿನಿಮಾ ನಟ ಆಗೇ ಆಗ್ತೀನಿ ಅಂತ ಶಪಥ ಮಾಡಿದವನು. ಬಾಲ ಕಲಾವಿದನಾಗಿ ಸಿನಿಮಾಗಳಲ್ಲಿ ಕಾಣಿಸಿಕೊಳ್ಳಬೇಕು ಎಂಬ ಆಸೆಯಿಂದ ಸತತವಾಗಿ ಪ್ರಯತ್ನಪಡುತ್ತಲೇ ಬಂದವನು. ಅವಕಾಶ ಸಿಕ್ಕಿರಲಿಲ್ಲ. ಆದರೆ ಪ್ರಯತ್ನವನ್ನೂ ನಿಲ್ಲಿಸಿರಲಿಲ್ಲ.

ಯೋಗರಾಜ್ ಭಟ್ ತಂಡದ 'ಪದವಿ ಪೂರ್ವ' ಎಂಬ ಸಿನಿಮಾಗೆ ಹೀರೊ ಹುಡುಕುತ್ತಿದ್ದಾರೆ. ಚಿಕ್ಕ ವಯಸ್ಸಿನ ಹುಡುಗ ನಾಯಕನ ಪಾತ್ರಕ್ಕೆ ಬೇಕಾಗಿದೆ ಎಂಬ ಸುದ್ದಿ ಕಿವಿಗೆ ಬಿದ್ದಿದ್ದೇ ಆ ಹುಡುಗನ ಮನಸಲ್ಲಿ ಆಸೆ ಚಿಗುರೊಡೆಯಿತು. ಬೆಂಗಳೂರಿಗೆ ಹೋಗಿ ಯೋಗರಾಜ್ ಭಟ್ ಅವರನ್ನು ಭೇಟಿಯಾಗಿ, ಸಿನಿಮಾಗೆ ಆಯ್ಕೆಯಾದಾಗಲಂತೂ ಆ ಹುಡುಗನ ಎದೆಯಲ್ಲಿ ನೂರು ಚಿಟ್ಟೆಗಳು ಒಟ್ಟೊಟ್ಟಿಗೇ ಹಾರಿದಂತಾದವು.

'ಯೋಗರಾಜ್ ಸರ್ ಭೇಟಿಯಾಗಿ ವಾಪಸ್ ಬಂದ ಮೇಲೆ ನನಗೆ ಒಂದು ವಾರ ನಿದ್ರೆಯೇ ಬರಲಿಲ್ಲ. ನಿದ್ರೆ ಬಂದರೆ ಕನಸಲ್ಲೂ ಅವರ ಮಾತುಗಳೇ ನೆನಪಾಗುತ್ತಿದ್ದವು. ನಾನು ಸಿನಿಮಾವೊಂದರಲ್ಲಿ ನಾಯಕನಾಗಿ ನಟಿಸುತ್ತಿದ್ದೇನೆ ಎಂಬ ವಿಷಯವನ್ನು ನನಗೇ ನಂಬುವುದು ಕಷ್ಟವಾಗಿತ್ತು. ಕನಸೋ ನನಸೋ ಎಂಬ ವಿಚಿತ್ರ ಗುಂಗಿನಲ್ಲೇ ಒಂದು ವಾರ ಕಳೆದೆ. ಹಾಗೆಯೇ ನನ್ನನ್ನು ಯಾವ ನಿರೀಕ್ಷೆ ಇಟ್ಟುಕೊಂಡು ಆಯ್ಕೆ ಮಾಡಿದ್ದಾರೋ, ಆ ನಿರೀಕ್ಷೆಗೆ ತಕ್ಕ ಹಾಗೆ ನಟಿಸಬಲ್ಲೆನೆ ಎಂಬ ಆತಂಕವೂ ಆಗುತ್ತಿತ್ತು' ಎಂದು ನಟನೆಯ ಬಹುದೀರ್ಘ ಕನಸೊಂದು ನನಸಾದ ಸಂಭ್ರಮದಲ್ಲಿ ಮಾತನಾಡುವ ಹುಡುಗನ ಹೆಸರು ಪೃಥ್ವಿ ಶಾಮನೂರು.

ಪೃಥ್ವಿ ದಾವಣಗೆರೆಯ ಶಾಮನೂರಿನ ಹುಡುಗ. ಹುಟ್ಟಿ ಬೆಳೆದಿದ್ದೆಲ್ಲ ಅಲ್ಲಿಯೇ. ದ್ವಿತೀಯ ಪಿಯುಸಿ ಓದುತ್ತಿರುವ ಪೃಥ್ವಿ ಈಗ ತಮ್ಮ ವಯಸ್ಸಿಗೆ ಮತ್ತು ಮನಸ್ಸಿಗೆ ತುಂಬ ಹತ್ತಿರದಿಂದ ಹೋಲುವಂಥ ಸಿನಿಮಾದಲ್ಲಿ ನಟಿಸುತ್ತಿರುವ ಖುಷಿಯಲ್ಲಿದ್ದಾರೆ. ಯೋಗರಾಜ್ ಭಟ್ ಗರಡಿಯಲ್ಲಿ ಪಳಗಿದ ಹರಿಪ್ರಸಾದ್ ಈ ಚಿತ್ರಕ್ಕೆ ಮೊದಲ ಸಲ ಆಕ್ಷನ್ ಕಟ್ ಹೇಳುತ್ತಿದ್ದಾರೆ.

'ನನ್ನ ಈಗಿನ ಕಾಲೇಜು ಜೀವನಕ್ಕೂ ಈ ಚಿತ್ರದ ಕಥೆಗೂ ತುಂಬ ಸಾಮ್ಯತೆಗಳಿವೆ. ಹಾಗಾಗಿ ನನಗೆ ಈ ಪಾತ್ರದಲ್ಲಿ ನಟಿಸುವುದು ಸುಲಭವಾಗಬಹುದು. ನನ್ನ ಸ್ನೇಹಿತರ ಜೊತೆಗಿನ ಮಾತು, ಒಡನಾಟ, ಕಾಲೇಜಿನಲ್ಲಿ ಉಪನ್ಯಾಸಕರ ಜೊತೆಗೆ ನಡೆದುಕೊಳ್ಳುತ್ತಿದ್ದ ರೀತಿಯನ್ನು ಮನಸಲ್ಲೇ ಮತ್ತೊಮ್ಮೆ ಪುನರ್ಮನನ ಮಾಡಿಕೊಳ್ಳುತ್ತಿದ್ದೇನೆ' ಎಂದು ಪಾತ್ರದ ಸಿದ್ಧತೆಯ ಕುರಿತೂ ಹೇಳುತ್ತಾರೆ. ಚಿತ್ರೀಕರಣಕ್ಕೂ ಮುನ್ನ ಯೋಗರಾಜ್ ಭಟ್ ಅವರೇ ನಟನೆಯ ಕೆಲವು ಕೌಶಲಗಳನ್ನು ಕಲಿಸಿಕೊಡುವ ಭರವಸೆ ನೀಡಿರುವುದು ಪೃಥ್ವಿಯ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ.

ಈಗಿನ್ನೂ ಪಿಯುಸಿಯಲ್ಲಿ ಓದುತ್ತಿರುವ ಪೃಥ್ವಿಗೆ ನನ್ನ ಬದುಕಿನ ದಾರಿ ಸಿನಿಮಾ ಜಗತ್ತಿನೆಡೆಗೇ ಎಂಬುದು ಖಚಿತವಿದೆ. ಹಾಗೆಂದು ವಿದ್ಯಾಭ್ಯಾಸವನ್ನು ಅವರೇನೂ ನಿರ್ಲಕ್ಷಿಸಿಲ್ಲ. 'ಓದು ಎಂದಿಗಾದರೂ ನಮ್ಮ ಕೈ ಹಿಡಿಯುತ್ತದೆ. ಹಾಗಾಗಿ ವಿದ್ಯಾಭ್ಯಾಸ ಕೈಬಿಡಲಾರೆ. ಓದು ಮುಂದುವರಿಸುತ್ತಲೇ ಸಿನಿಮಾಗಳನ್ನು ಮಾಡುತ್ತೇನೆ. ವಿದ್ಯಾಭ್ಯಾಸ ಮುಗಿದ ಮೇಲೆ ಪೂರ್ತಿ ಸಿನಿಮಾದಲ್ಲಿ ತೊಡಗಿಕೊಳ್ಳುತ್ತೇನೆ' ಎನ್ನುವ ಪೃಥ್ವಿಗೆ ಚಂದನವನದ ಅಂಬರದಲ್ಲಿ ಬೆಳಗುವ ಹಂಬಲವಿದೆ. ■